ಸಂಖ್ಯೆ: ಸಿಐ 45 ಐಎಪಿ 90

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 18-1-1991.

# ಸುತ್ತೋಲೆ

ವಿಷಯ ಡಾ. ಸರೋಜಿನಿ ಮಹಿಷಿ ಸಮಿತಿ ಮತ್ತು ಕನ್ನಡಿಗರ ಉದ್ಯೋಗ ಸಮಿತಿ ಸಲ್ಲಿಸಿರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಬಗ್ಗೆ.

ಡಾ. ಸರೋಜಿನಿ ಮಹಿಷಿ ಸಮಿತಿ ಮತ್ತು ಕನ್ನಡಿಗರ ಉದ್ಯೋಗ ಸಮಿತಿ ಸಲ್ಲಿಸಿರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಾಣಿಸಿದ ಶರತ್ತುಗಳನ್ನು ವಿಧಿಸುವುದರ ಜೊತೆಗೆ ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವಂತೆ ಈ ಮೂಲಕ ಸೂಚಿಸಲಾಗಿದೆ.

(1) ಕೇಂದ್ರ ಸಾರ್ವಜನಿಕ ಉದ್ಯಮಗಳನ್ನು ಸ್ಥಾಪಿಸಲು ನೆಲ, ಜಲ, ವಿದ್ಯುಚ್ಛಕ್ತಿ ಮುಂತಾದವುಗಳನ್ನು ನೀಡುವಾಗ ಸದರಿ ಕೇಂದ್ರ ಸಾರ್ವಜನಿಕ ಉದ್ದಿಮೆಗಳಲ್ಲಿ ಗ್ರೂಪ್ ಸಿ ಮತ್ತು ಡಿ ಗಳಿಗೆ ಶೇಕಡಾ 100 ರಷ್ಟು ಮತ್ತು ಗ್ರೂಪ್ ಬಿ ಹುದ್ದೆಗಳಿಗೆ ಶೇಕಡಾ 80 ಕ್ಕೆ ಕಡಿಮೆ ಇಲ್ಲದಂತೆ ಮತ್ತು ಗ್ರೂಪ್ ಎ ಹುದ್ದೆಗಳಿಗೆ ಶೇಕಡಾ 65 ರಷ್ಟು ಕನ್ನಡಿಗರನ್ನು ನೇಮಿಸಿಕೊಳ್ಳಬೇಕೆಂಬ ಶರತ್ತನ್ನು ಹಾಕಬೇಕು. ರಾಜ್ಯ ಸರ್ಕಾರದ ಅಥವಾ ಅಖಿಲ ಭಾರತ ಸೇವೆಯ ಅಧಿಕಾರಿಗಳನ್ನು ಈ ನೇಮಕಾತಿಯ ಸಮಯದಲ್ಲಿ ಒಡಗೂಡಿಸಬೇಕು.

(2) ರಾಜ್ಯ ಸರ್ಕಾರದಿಂದ ಪೂರ್ವಭಾವಿ ವ್ಯವಸ್ಥೆ ಸಹಾಯ ಧನವನ್ನು ಪಡೆದು ಸ್ಥಾಪಿತವಾಗಿರುವ ಖಾಸಗೀ ಉದ್ದಿಮೆಗಳು ಉದ್ದಿಮೆಯಲ್ಲಿರುವ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಿಕೊಳ್ಳಬೇಕು.

ರಾಜ್ಯದಲ್ಲಿರುವ ಖಾಸಗೀ ಉದ್ದಿಮೆಗಳಿಗೆ ಕೆ.ಎಸ್.ಐ.ಡಿ.ಸಿ., ಕೆ.ಎಸ್.ಎಫ್.ಸಿ, ಕೆ.ಇ.ಬಿ., ಮುನಿಸಿಪಾಲಿಟಿ, ನೀರು ಮತ್ತು ಒಳಚಂರಡಿ ಮಂಡಳಿ ಮುಂತಾದ ಸಂಸ್ಥೆಗಳು ಸೇವೆಯನ್ನು ಒದಗಿಸುವಾಗ ಉದ್ದಿಮೆಯಲ್ಲಿರುವ ಎಲ್ಲಾ ಹುದ್ದೆಗಳಿಗೆ ಕನ್ನಡಿಗರನ್ನೇ ನೇಮಿಸಿಕೊಳ್ಳಬೇಕೆಂಬ ಷರತ್ತನ್ನು ಹಾಕಬೇಕು.

(3) ಕೈಗಾರಿಕೆಗಳನ್ನು ಸ್ಥಾಪಿಸುವಾಗ ಹಾಗೂ ಅವುಗಳಿಗೆ ರಿಯಾಯಿತಿ ನೀಡುವ ಸಂದರ್ಭದಲ್ಲಿ ಕನ್ನಡಿಗರಿಗೆ ಆದ್ಯತೆಯನ್ನು ಕೊಡುವಂತೆ ಹಾಗೂ ಸರ್ಕಾರದ ನೆರವನ್ನು ಪಡೆದು ಸ್ಥಾಪಿಸಲಾಗುವ ಕೈಗಾರಿಕೆಗಳನ್ನು ಕನ್ನಡಿಗರಿಗೆ ಉದ್ಯೋಗಾವಕಾಶವನ್ನು ಕೊಡಬೇಕೆಂಬ ಕರಾರನ್ನು ಹಾಕಬೇಕು.

(4) ನೂರಕ್ಕಿಂತ ಹೆಚ್ಚಿನ ಸಂಖ್ಯೆಯ ನೌಕರರು ಇರುವ ಖಾಸಗೀ ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿಯನ್ನು ಸೇರಿಸುವಂತೆ ಉದ್ಯಮಗಳ್ನನು ಒತ್ತಾಯಿಸಬೇಕು.

(5) ಉದ್ಯಮಗಳ ನೇಮಕಾತಿ ಸಮಿತಿಗಳಲ್ಲಿರುವ ರಾಜ್ಯ ಸರ್ಕಾರದ ಪ್ರತಿನಿಧಿಗಳು ಈ ಸಮಿತಿಗಳ ನಡವಳಿಕೆಗಳ ಬಗ್ಗೆ ಸರ್ಕಾರಕ್ಕೆ ವರದಿಗಳನ್ನು ಕಳುಹಿಸಬೇಕು. ಈ ವರದಿಗಳ ಪರಿಶೀಲನೆಗೆ ಒಂದು ಘಟಕವನ್ನು ರಚಿಸುವಂತೆಯೂ ವ್ಯವಸ್ಥೆ ಮಾಡಬೇಕು. ಆವಶ್ಯವಿದ್ದರೆ ವಿಭಾಗ ಮಟ್ಟದಲ್ಲಿ ಸಹ ಈ ಘಟಕಗಳ ಶಾಖೆಗಳು ಪರಿಶೀಲನೆ ನಡೆಸುವಂತೆ ಮಾಡಬೇಕು.

(6) ಮಹಾರಾಷ್ಟ್ರದಲ್ಲಿರುವ ಪದ್ಧತಿಯಂತೆ ಉದ್ಯಮಗಳಿಂದ ಕನ್ನಡಿಗರಿಗೆ ನಿಗಧಿಪಡಿಸಿದ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನು ಒದಗಿಸುವ ಬಗ್ಗೆ ಪ್ರತಿವರ್ಷ ಘೋಷಣೆ ಪ್ರಪತ್ರವನ್ನು (ಡಿಕ್ಲರೇಷನ್) ಪಡೆಯಬೇಕು. ಈ ಪ್ರಪತ್ರವನ್ನು ಪಡೆಯುವ ಮತ್ತು ಪರಿಶೀಲಿಸುವ ಜವಾಬ್ದಾರಿಕೆಯನ್ನು ಮೇಲೆ ಸೂಚಿಸಿರುವ ಘಟಕಕ್ಕೆ ವಹಿಸಿಕೊಡಬೇಕು.

(7) ಅನ್ಸಿಲರಿ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡುವಾಗ ಕನ್ನಡಿಗರಿಗೆ ಪ್ರೋತ್ಸಾಹ ಕೊಡುವಂತೆ ಕ್ರಮ ತೆಗೆದುಕೊಳ್ಳಬೇಕು.

(8) ಉದ್ಯಮಗಳ ಸ್ಥಾಪನೆ ಮತ್ತು ವಿಸ್ತರಣೆ ಪ್ರಸ್ತಾಪ ಬಂದಾಗ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವನ್ನು ಒದಗಿಸಿದಾಗ ಕರ್ನಾಟಕ ರಾಜ್ಯ ಆರ್ಥಿಕ ನಿಗಮವು ಉದ್ಯೋಗ ವಿನಿಮಯ ಕೇಂದ್ರಗಳೀಗೆ ತಿಳಿಸಬೇಕು. ಈ ಕೇಂದ್ರಗಳು ತಮ್ಮಲ್ಲಿ ಹೆಸರು ನೋಂದಾಯಿಸಿದ ಅಭ್ಯರ್ಥಿಗಳ ನೇಮಕಕ್ಕೆ ಪ್ರಯತ್ನಿಸಬೇಕು.

(9) ರಾಜ್ಯದಲ್ಲಿರುವ ಉದ್ಯಮಗಳೀಗೆ ಬೇಕಾಗಿರುವ ವಿಶೇಷ ತಾಂತ್ರಿಕ ತರಬೇತಿ ಪಡೆಯಲು ಉದ್ಯೋಗ ತರಬೇತಿ ಕೇಂದ್ರಗಳಲ್ಲಿ (ಐ.ಟಿ.ಐ) ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಧಿಕಾರ ಮಾಡಿದರೆ ಹೊರ ರಾಜ್ಯದಿಂದ ಈ ವಿಶೇಷ ತರಬೇತಿ ಪಡೆದ ಅಭ್ಯರ್ಥಿಗಳನ್ನು ಕರೆಯಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಸಮಿತಿಯು ಉದ್ಯಮಗಳೀಗೆ ಭೇಟಿ ಕೊಟ್ಟಾಗ ಇಂತಹ ತಾಂತ್ರಿಕ ವಿಷಯಗಳ ಗುರುತಿಸಿರುವ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕು.

(10) ಪ್ರಾಥಮಿಕ ಮಟ್ಟದಲ್ಲಿಯೇ ಐಚ್ಛಿಕವಾಗಿ ವೃತ್ತಿ ತರಬೇತಿ ಪಡೆಯುವ ವ್ಯವಸ್ಥೆ ಮಾಡಬೇಕು.

(11) ಕೈಗಾರಿಕಾ ವಸಾಹತುಗಳು ಹಾಗೂ ದೊಡ್ಡ ಪ್ರಮಾಣದ ಉದ್ಯಮಗಳು ಸ್ಥಾಪನೆಯಾಗುವ ಪ್ರದೇಶಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯುವ ಅವಕಾಶ ಮಾಡಲು ಅಲ್ಲಿ ವೃತ್ತಿ ತರಬೇತಿ ಕೇಂದ್ರ ಹಾಗೂ ಉದ್ಯೋಗ ವಿನಿಮಯ ಕೇಂದ್ರಗಳನ್ನು ತೆರೆಯಲು ವ್ಯವಸ್ಥೆ ಮಾಡಬೇಕು.

(12) ಕೇಂದ್ರ ಸರ್ಕಾರೀ ವಲಯದ ಉದ್ಯಮಗಳಲ್ಲಿ ವೇತನ ಶ್ರೇಣಿಯ ಪರಮಾವಧಿ ರೂ. 1250ಕ್ಕಿಂತ ಹೆಚ್ಚು ಇರದ ಹುದ್ದೆಗಳಿಗೆ ನ್ಯಾಷನಲ್ ಎಂಪ್ಲಾಯ್‌ಮೆಂಟ್ ಸರ್ವಿಸ್ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ವೇತನ ಶ್ರೇಣಿಯ ಮಿತಿಯನ್ನು ರೂ. 1600 ಗಳಿಗೆ ಏರಿಸುವುದಲ್ಲದೆ ವೇತನ ಶ್ರೇಣಿ ಪರಿಷ್ಕರಣೆಯಾದಾಗಲೆಲ್ಲ, ಈ ಮಿತಿಯನ್ನು ಪರಿಷ್ಕರಿಸುತ್ತಾ ಬರಬೇಕು.

– ಸಹಿ –
(ಟಿ. ಆರ್. ರೇಣುಕಾರಾಧ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಕೈಗಾರಿಕಾಭಿವೃದ್ಧಿ)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ಡಾ: ಸರೋಜಿನಿ ಮಹಿಷಿ ಸಮಿತಿ ಮತ್ತು ಕನ್ನಡಿಗರ ಉದ್ಯೋಗ ಸಮಿತಿಯ ಶಿಫಾರಸ್ಸನ್ನು ಜಾರಿಗೊಳಿಸಿದ ಬಗ್ಗೆ ಪರಿಶೀಲನಾ ಘಟಕವನ್ನು ರಚಿಸುವ ಬಗ್ಗೆ.

ಓದಲಾಗಿದೆ
1) ಸುತ್ತೋಲೆ ಸಂಖ್ಯೆ: ಸಿಐ 45 ಐಎಪಿ 90, ದಿನಾಂಕ: 18-1-91.
2) ಪತ್ರ ಸಂಖ್ಯೆ: ಎಇಪಿ:ಇಪಿಸಿ:ಎ2:102:91-92, ದಿನಾಂಕ: 28.10.91 ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರಿಂದ

**ಪ್ರಸ್ತಾವನೆ:**

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರವರು ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ ದಿನಾಂಕ: 28.10.91ರ ಪತ್ರದಲ್ಲಿ, ಹಿಂದೆ ಹೊರಡಿಸಿರುವ ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಐ 4 ಪಿಯುಎಂ 83, ದಿನಾಂಕ: 6.1.1983 ಮತ್ತು ಸಿಐ 39 ಎಸ್‌ಎಂಐ 84, ದಿನಾಂಕ: 4.5.1985 ರ ಪ್ರಕಾರ ರಾಜ್ಯದಲ್ಲಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಭಾರಿ ಮತ್ತು ಮಧ್ಯಮ ವರ್ಗದ ಘಟಕಗಳಲ್ಲಿನ ವಿವಿಧ ಹುದ್ದೆಗಳ ಸಮಿತಿಗಳಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಿ, ಕರ್ನಾಟಕದವರಿಗೆ ಪ್ರಾಮುಖ್ಯತೆ ನೀಡಿ, ಕನ್ನಡ ಮಾತನಾಡಲು, ಓದಲು ಮತ್ತು ಬರೆಯಲು ಬರುವಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆಯ್ಕೆಯಾದ ಅಭ್ಯರ್ಥಿಗಳ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಆಗಿಂದಾಗ್ಗೆ ಸರ್ಕಾರಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ. ಈಗಿನ ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಐ 45 ಐಎಪಿ 90, ದಿನಾಂಕ: 18.1.91ರ 5ನೇ ಷರತ್ತಿನಂತೆ ಉದ್ಯಮಗಳ ನೇಮಕಾತಿ ಸಮಿತಿಯಲ್ಲಿರುವ ರಾಜ್ಯ ಸರ್ಕಾರದ ಪ್ರತಿನಿಧಿಗಳು ಭಾಗವಹಿಸಿ ಅವರುಗಳು ಕಳುಹಿಸಿದ ಸಮಿತಿಯ ನಡವಳಿಗಳ ವರದಿಗಳನ್ನು ಪರಿಶೀಲಿಸಲು, ಈ ಕೆಳಕಂಡ ಸದಸ್ಯರನ್ನೊಳಗೊಂಡ ಒಂದು ಘಟಕವನ್ನು ಸರ್ಕಾರದ ಹಂತದಲ್ಲಿ ರಚಿಸಬೇಕೆಂದು ಕೋರಿದ್ದಾರೆ.

| | | |
|---|---|---|
| 1) | ಆಯುಕ್ತರು ಮತ್ತು ಕಾರ್ಯದರ್ಶಿಗಳು<br>ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | ಸಭಾಪತಿ |
| 2) | ಆಯುಕ್ತರು ಕೈಗಾರಿಕಾಭಿವೃದ್ಧಿ ಮತ್ತು<br>ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು |
| 3) | ಕಾರ್ಯದರ್ಶಿಗಳು<br>ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ | ಸದಸ್ಯರು |
| 4) | ನಿರ್ದೇಶಕರು<br>ಉದ್ಯೋಗ ಮತ್ತು ತರಬೇತಿ ಇಲಾಖೆ | ಸದಸ್ಯರು |
| 5) | ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 6) | ನಿರ್ದೇಶಕರು, ಹಿಂದುಳಿದ ವರ್ಗಗಳ<br>ಮತ್ತು ಅಲ್ಪ ಸಂಖ್ಯಾತರ ಇಲಾಖೆ | ಸದಸ್ಯರು |
| 7) | ನಿರ್ದೇಶಕರು, ಅಂಗಹೀನ ಕಲ್ಯಾಣ ಇಲಾಖೆ | ಸದಸ್ಯರು |
| 8) | ಸಂಯುಕ್ತ ನಿರ್ದೇಶಕರು (ಎಇಪಿ)<br>ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು ಮತ್ತು ಕಾರ್ಯದರ್ಶಿ |

## ಸರ್ಕಾರಿ ಆದೇಶ ಸಂಖ್ಯೆ: ಸಿಐ 45 ಐಎಪಿ 90 ಬೆಂಗಳೂರು, ದಿನಾಂಕ: 6ನೇ ಜನವರಿ 1992

ಮೇಲೆ ತಿಳಿಸಿದ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಉದ್ಯಮಗಳ ನೇಮಕಾತಿ ಸಮಿತಿಯಲ್ಲಿರುವ ರಾಜ್ಯ ಸರ್ಕಾರದ ಪ್ರತಿನಿಧಿಗಳು ಸದರಿ ಸಮಿತಿಗಳ ನಡವಳಿಕೆಗಳ ಬಗ್ಗೆ ಸಲ್ಲಿಸಿರುವ ವರದಿಗಳನ್ನು ಪರಿಶೀಲಿಸಲು ಆಯುಕ್ತರು

ಮತ್ತು ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಘಟಕವನ್ನು ರಚಿಸಲಾಗಿದೆ.

| | |
|---|---|
| 1) ಆಯುಕ್ತರು ಮತ್ತು ಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | ಸಭಾಪತಿ |
| 2) ಆಯುಕ್ತರು ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು |
| 3) ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ | ಸದಸ್ಯರು |
| 4) ನಿರ್ದೇಶಕರು ಉದ್ಯೋಗ ಮತ್ತು ತರಬೇತಿ ಇಲಾಖೆ | ಸದಸ್ಯರು |
| 5) ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 6) ನಿರ್ದೇಶಕರು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ | ಸದಸ್ಯರು |
| 7) ನಿರ್ದೇಶಕರು, ಅಂಗಹೀನ ಕಲ್ಯಾಣ ಇಲಾಖೆ | ಸದಸ್ಯರು |
| 8) ಸಂಯುಕ್ತ ನಿರ್ದೇಶಕರು (ಎಇಪಿ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸದಸ್ಯರು ಮತ್ತು ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

–ಸಹಿ–
(ಟಿ. ಆರ್. ರೇಣುಕಾರಾಧ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ | ಡಾ: ಸರೋಜಿನಿ ಮಹಿಷಿ ಸಮಿತಿ ಮತ್ತು ಕನ್ನಡಿಗರ ಉದ್ಯೋಗ ಸಮಿತಿಯ ಶಿಫಾರಸ್ಸನ್ನು ಜಾರಿಗೊಳಿಸುವ ಬಗ್ಗೆ ಪರಿಶೀಲನೆಗಾಗಿ ರಚಿಸಿರುವ ಘಟಕದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರನ್ನು ಸದಸ್ಯರನ್ನಾಗಿ ನೇಮಿಸುವ ಬಗ್ಗೆ. |
| ಓದಲಾಗಿದೆ | ಸರ್ಕಾರದ ಆದೇಶ ಸಂಖ್ಯೆ: ಸಿಐ 45 ಐಎಪಿ 90 ದಿ: 6.1.92 |

**ಪ್ರಸ್ತಾವನೆ:**

ಮೇಲೆ ಓದಲಾದ 6.1.92ರ ಸರ್ಕಾರಿ ಆದೇಶದಲ್ಲಿ ಉದ್ಯಮಗಳ ನೇಮಕಾತಿ ಸಮಿತಿಯಲ್ಲಿರುವ ರಾಜ್ಯ ಸರ್ಕಾರದ ಪ್ರತಿನಿಧಿಗಳು ಸದರಿ ಸಮಿತಿಗಳ ನಡವಳಿಕೆ ಬಗ್ಗೆ ಸಲ್ಲಿಸುವ ವರದಿಗಳನ್ನು ಪರಿಶೀಲಿಸಲು ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಒಂದು ಘಟಕವನ್ನು ರಚಿಸಲಾಗಿದೆ.

ಈ ಘಟಕವು ವ್ಯವಹರಿಸುವ ವಿಷಯವನ್ನು ಪರಿಗಣಿಸಿ, ಇದರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಒಬ್ಬ ಪ್ರತಿನಿಧಿಯು ಸದಸ್ಯರಾಗುವುದು ಸೂಕ್ತ ಎಂದು ಸರ್ಕಾರ ಮನಗಂಡಿದೆ. ಇದಕ್ಕಾಗಿ ಕೆಳಗಿನಂತೆ ಆದೇಶ ಹೊರಡಿಸಿದೆ:

**ಸರ್ಕಾರಿ ಆದೇಶ ಸಂಖ್ಯೆ: ಸಿಐ 77 ಆರ್‌ಐಎಸ್ 95 ಬೆಂಗಳೂರು ದಿನಾಂಕ: 12.2.1993**

ದಿನಾಂಕ: 6.1.92ರ ಆದೇಶ ಸಂಖ್ಯೆ : ಸಿಐ 45 ಐಎಪಿ 90ರಲ್ಲಿ ರಚಿಸಿರುವ ಸಮಿತಿಯಲ್ಲಿ ಉಪ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರನ್ನೂ ಸದಸ್ಯರಾಗಿ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

– ಸಹಿ –
(ಎಸ್. ಜಿ. ದತ್ತಾತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಕೈಗಾರಿಕಾಭಿವೃದ್ಧಿ)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ಡಾ: ಸರೋಜಿನಿ ಮಹಿಷಿ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ
– ಕೈಗಾರಿಕಾ ಘಟಕಗಳಲ್ಲಿ ಕನ್ನಡಿಗರಿಗೆ ಮತ್ತು ಸ್ಥಳೀಯರಿಗೆ ಉದ್ಯೋಗ
ದೊರಕಿಸಿಕೊಡುವ ಬಗ್ಗೆ.

**ಪ್ರಸ್ತಾವನೆ:**

ಖಾಸಗಿ ಕೈಗಾರಿಕಾ ಘಟಕಗಳ್ಲಲಿ ಕನ್ನಡಿಗರಿಗೆ ಉದ್ಯೋಗವನ್ನು ದೊರಕಿಸಿಕೊಡುವ ವಿಷಯವು ಬಹಳ ವರ್ಷಗಳಿಂದ ಸರ್ಕಾರದ ಚಿಂತನೆಯಲ್ಲಿತ್ತು. ಇತ್ತೀಚೆಗೆ ಬಹಳಷ್ಟು ಬೃಹತ್ ಯೋಜನೆಗಳನ್ನು ಸರ್ಕಾರದ ಮಟ್ಟದಲ್ಲಿ ಅನುಮೋದಿಸಲಾಗಿದೆ. ಇವುಗಳಲ್ಲಿ ಕೆಲವು ಹಿಂದುಗಳಿದ ಜಿಲ್ಲೆಗಳಲ್ಲಿ ಸ್ಥಾಪಿತವಾಗಿದೆ. ಈ ದಿಶೆಯಲ್ಲಿ ಈ ಬೃಹತ್ ಯೋಜನೆಗಳ ಸ್ಥಾಪನೆಗಾಗಿ ಜಮೀನು ಕಳೆದುಕೊಂಡಂತಹ ಸ್ಥಳೀಯ ರೈತರುಗಳಿಗೆ ಅಲ್ಲಿಯೇ ಸ್ಥಾಪಿಸಲಾಗಿರುವ ಕೈಗಾರಿಕಾ ಘಟಕಗಳಲ್ಲಿ ಉದ್ಯೋಗವನ್ನು ದೊರಕಿಸಿಕೊಡುವುದು ಅತೀ ಅವಶ್ಯಕವಾದ ವಿಷಯವೆಂದು ಪರಿಗಣಿಸಲಾಯಿತು.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 228 ಆರ್‌ಐಎಸ್ 90, ಬೆಂಗಳೂರು, ದಿನಾಂಕ: 21–4–1995.**

ಡಾ: ಸರೋಜಿನಿ ಮಹಿಷಿ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ವಿಷಯವನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ತಕ್ಷಣವೇ ಜಾರಿಗೆ ಬರುವಂತೆ ಹೊರಡಿಸಲಾಗಿದೆ:

1. ಕನ್ನಡಿಗರಿಗೆ (ಯಾರು ರಾಜ್ಯದಲ್ಲಿ ಕನಿಷ್ಠ ಹದಿನೈದು ವರ್ಷ ವಾಸವಾಗಿರುವರೊ ಮತ್ತು ಕನ್ನಡ ಓದುವ ಮತ್ತು ಬರೆಯುವ ಜ್ಞಾನವಿದೆಯೋ ಅಂತಹವರನ್ನು ಕನ್ನಡಿಗರೆಂದು ಪರಿಗಣಿಸಲಾಗುವುದು ಈ ವಿಷಯವನ್ನು ಪಡಿತರ ಚೀಟಿ, ಶಾಲೆಯ ಸರ್ಟಿಫಿಕೇಟ್, ಮತದಾರರ ಪಟ್ಟಿ ಅಥವಾ ಜನ್ಮ ದಾಖಲೆ ಇವುಗಳ ಆಧಾರದ ಮೇಲೆ ನಿರ್ಧರಿಸಲಾಗುವುದು) ಕೈಗಾರಿಕಾ ಘಟಕಗಳಲ್ಲಿ ಉದ್ಯೋಗ ದೊರಕಿಸಿಕೊಡಲು ಈ ಘಟಕಗಳ ಸ್ಥಾಪನೆಗಾಗಿ ಭೂಮಿಯನ್ನು ಕಳೆದುಕೊಂಡ ರೈತ ಕುಟುಂಬದವರಲ್ಲಿ ಒಬ್ಬರಿಗೆ ಉದ್ಯೋಗವನ್ನು ಅವರ ವಿದ್ಯಾರ್ಹತೆಗೆ ತಕ್ಕಂತೆ ಮತ್ತು ಕೈಗಾರಿಕಾ ಘಟಕಗಳ ಉಪಯುಕ್ತತೆಗೆ ತಕ್ಕಂತೆ ಕಡ್ಡಾಯವಾಗಿ ದೊರಕಿಸಿ ಕೊಡಲು ಕ್ರಮ ಕೈಗೊಳ್ಳುವುದು.

2. ಎಲ್ಲಾ ಕೈಗಾರಿಕಾ ಘಟಕಗಳ ಸಿಬ್ಬಂದಿ ಅಧಿಕಾರಿಯು (Personnel Officer) ಕನ್ನಡಿಗನೇ ಆಗಿರಬೇಕೆಂದು ಒತ್ತಾಯಿಸುವುದು.

3. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏಕ ಗವಾಕ್ಷಿ ಏಜೆನ್ಸಿಯ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ ಕನ್ನಡಿಗರಿಗೆ ಉದ್ಯೋಗ ದೊರಕಿಸುವ ಬಗ್ಗೆ ಕಾರ್ಯಕ್ರಮಗಳನ್ನು ಸಮೀಕ್ಷಿಸುವುದು.

4. 50 ಅಥವಾ ಅದಕ್ಕಿಂತ ಹೆಚ್ಚಿನ ಕಾರ್ಮಿಕರಿರುವ ಎಲ್ಲಾ ಕೈಗಾರಿಕಾ ಘಟಕಗಳನ್ನು ಈ ಸಮಿತಿಯ ಅಧೀನಕ್ಕೆ ಒಳಪಡಿಸುವುದು.

5. ಹೊಸ ಕೈಗಾರಿಕಾ ಘಟಕಗಳು ಕನ್ನಡಿಗರನ್ನು ನೇಮಕಾತಿ ಮಾಡುವ ಬಗ್ಗೆ ಈ ಆದೇಶಗಳನ್ನು ಉಲ್ಲಂಘಿಸಿದಲ್ಲಿ ಈ ಸಮಿತಿಯು ಅಂತಹ ಕೈಗಾರಿಕಾ ಘಟಕಗಳಿಗೆ ನೀಡಲಾದ ಎಲ್ಲಾ ಸವಲತ್ತುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು. ರಾಜ್ಯ ಮಟ್ಟದಲ್ಲಿ ಏಕ ಗವಾಕ್ಷಿ ಏಜೆನ್ಸಿ ಕೂಡ ಈ ವಿಷಯವನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಸಲ್ಲಿಸುವುದು.

6. ಜಿಲ್ಲಾ ಮಟ್ಟದ ಸಮಿತಿಯು ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಈ ಆದೇಶದ ಅನುಷ್ಠಾನದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು ಮತ್ತು ಇದೇ ರೀತಿಯಲ್ಲಿ ರಾಜ್ಯ ಮಟ್ಟದಲ್ಲಿ ರಾಜ್ಯ ಮಟ್ಟದ ಏಕ ಗವಾಕ್ಷಿ ಏಜೆನ್ಸಿ ಮೂಲಕ 3 ತಿಂಗಳಿಗೊಮ್ಮೆ ಜಿಲ್ಲಾ ಮಟ್ಟದ ವರದಿಯನ್ನು ವಿಮರ್ಶಿಸುವುದು.

7. 50 ಅಥವಾ 50 ಕ್ಕಿಂತ ಹೆಚ್ಚು ಕಾರ್ಮಿಕರನ್ನು ಒಳಗೊಂಡ ಎಲ್ಲಾ ಕೈಗಾರಿಕಾ ಘಟಕಗಳ ನೇಮಕಾತಿ ವಿವರಗಳನ್ನು ಮೂರು ತಿಂಗಳಿಗೊಮ್ಮೆ ಪ್ರಪತ್ರದಲ್ಲಿ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರ (ಪೂರಕ ಉದ್ದಿಮೆ ಮತ್ತು ಉದ್ಯೋಗ ಕಾರ್ಯಕ್ರಮ) ಹಾಗೂ ಸಂಬಂಧಪಟ್ಟ ಜನರಲ್ ಮ್ಯಾನೇಜರ್ ಜಿಲ್ಲಾ ಕೈಗಾರಿಕಾ ಕೇಂದ್ರ, ಇವರುಗಳಿಗೆ ಕಡ್ಡಾಯವಾಗಿ ಸಲ್ಲಿಸುವುದು.

8. ಕೈಗಾರಿಕಾ ಘಟಕಗಳಿಗೆ ಅವಶ್ಯವಿರುವ ವಿವಿಧ ನೈಪುಣ್ಯತೆ ಮತ್ತು ಕುಶಲತೆಯನ್ನು ಹಾಗೂ ಪರಿಣಿತರಾದ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವ ಬಗ್ಗೆ ಅನುವು ಮಾಡಿಕೊಳ್ಳಲು ಮತ್ತು ಅಂತಹ ನೈಪೂಣ್ಯತೆಯನ್ನು ಸ್ಥಳೀಯ ತಾಂತ್ರಿಕ ವಿದ್ಯಾ ಸಂಸ್ಥೆಗಳಲ್ಲಿ ಬೋಧಿಸುವ ಬಗ್ಗೆ ಕೈಗಾರಿಕಾ ಘಟಕಗಳ ಸಹಾಯವನ್ನು ತೆಗೆದುಕೊಳ್ಳುವುದು ಮತ್ತು ಇದೇ ರೀತಿಯಲ್ಲಿ ಪಾಠ ಪ್ರವಚನಗಳನ್ನು ಈ ತರಬೇತಿ ಸಂಸ್ಥೆಗಳಲ್ಲಿ ಅಳವಡಿಸುವಂತೆ ಉಪಯುಕ್ತ ರೀತಿಯಲ್ಲಿ ಅಭಿವೃದ್ಧಿಪಡಿಸುವುದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

-ಸಹಿ-
(ಸಿದ್ದಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

**PREAMBLE :**

The matter regarding providing employment to Kannadigas in the industrial units in the private sector has been engaging the attention of the Government for quite some time. In the recent past, large number of mega projects have been approved by the Government, and some of these projects are under implementation in the backward districts of the State. It is, therefore, considered necessary that local people, particularly those who have lost the lands for the projects in the concerned areas are provided employment in these industrial units.

**G.O. No. CI 228 RIS 90, BANGALORE, DATED 4-1-1996**

Government have therefore, examined in detail the matter regarding implementation of the recommendations of Dr. Sarojini Mahishi Committee Report order issued as below which shall come into effect forth with.

1) To ensure employment opportunities to Kannadigas, action will be taken to provide employment to at least one person in each family which has lost the lands for establishment of industrial units depending upon their educational qualification is also the requirement of the industrial units. Dr. Sarojini Mahishi Committee Report has mentioned " Kannadigas " as a person who has been residing in the State for at least 15 years and also is conversant both in written and spoken Kannada which fact can be verified with the help of certain documents like school leaving certification, ration card, electoral rolls, birth certificate, etc.
2) To insist that all industrial units should invariably employ a Kannadiga as the Personnel Officer.
3) To constitute a committee under the Chairmanship of the Deputy Commissioner including members of the District Level Single Window Agency to monitor the implementation providing employment scheme to Kannadigas.
4) To include all industrial units which employ 50 or more than 50 workers, under the jurisdiction of this Committee.
5) If any of the industrial units are found violating the orders of the Government in this regard the committee may recommend to the

Government for withdrawal of incentives and concessions granted to it, at the state level, the State Level Single Window Agency will review this matter and make suitable recommendation to the Government.

6) The committee shall meet at least once in three months and send a report to the Government regarding the implementation of these orders. At the State Level, the State Level Single Window Agency would review the reports of the District Level Committee once in quarter.

7) All industrial units employing 50 or more than 50 workers shall furnish without fail in a prescribed proforma, a quarterly report to the Joint Director (AEP), Industries & Commerce Department and also the concerned General Manager, District Industries Centre regarding the recruitment details.

8) To ensure that skills required by the industrial, unit in different parts of the State are taught in the local technical institutions / training institutions, Government will make efforts to associate the concerned industrial units to upgrade the facilities/ curricula in these technical institutions and training institutions.

By order and in the name
of the Government of Karnataka

- Sd -
Under Secretary to Government,
Commerce & Industries Department

# ಕರ್ನಾಟಕ ಸರ್ಕಾರದ ನಡವಳಿಗಳು

| | | |
|---|---|---|
| ವಿಷಯ | | ಡಾ: ಸರೋಜಿನಿ ಮಹಿಷಿ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ. |
| ಓದಲಾಗಿದೆ | 1. | ಸರ್ಕಾರಿ ಆದೇಶ ಸಂಖ್ಯೆ: ಸಿಐ 45 ಐಎಪಿ 90 ದಿ:18.01.91 |
| | 2. | ಸರ್ಕಾರಿ ಆದೇಶ ಸಂಖ್ಯೆ: ಸಿಐ 223 ಆರ್‌ಐಎಸ್ 90 ದಿ: 21.04.95 ಮತ್ತು 4.1.96 |
| | 3. | ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಎಇಪಿ: ಎ2: 190: 98–99 ದಿ: 1.4.99 |

**ಪ್ರಸ್ತಾವನೆ:**

ಮೇಲೆ ಓದಲಾದ–1ರಲ್ಲಿನ ಸರ್ಕಾರಿ ಆದೇಶ ದಿನಾಂಕ: 18.1.91ರಲ್ಲಿ ಡಾ: ಸರೋಜಿನಿ ಮಹಿಷಿ ಮತ್ತು ಕನ್ನಡಿಗರ ಸಮಿತಿ ಸಲ್ಲಿಸಿರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಸಂಬಂಧವಾಗಿ 100 ಅಥವಾ ಹೆಚ್ಚಿನ ಸಂಖ್ಯೆ ನೌಕರರಿರುವ ಅಂಕಿ ಅಂಶಗಳನ್ನು ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಪಡೆದು ಕ್ರೋಢೀಕರಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸುವ ತ್ರೈಮಾಸಿಕ ಸಭೆಯಲ್ಲಿ ಮಂಡಿಸಲು ಸೂಚಿಸಲಾಗಿತ್ತು.

2. ಓದಲಾದ–2ರಲ್ಲಿನ ಸರ್ಕಾರಿ ಆದೇಶ ದಿನಾಂಕ: 21.4.95 ಮತ್ತು 4.1.96ರಲ್ಲಿ ಡಾ: ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಸ್ಥಳೀಯರಿಗೆ ಉದ್ಯೋಗ ದೊರಕಿಸಿಕೊಡಲು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧೀನದಲ್ಲಿನ ಇಲಾಖೆ : ಸಂಸ್ಥೆಗಳೀಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

3. ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರು ಓದಲಾದ–2ರಲ್ಲಿನ ಪತ್ರದಲ್ಲಿ ಕನಿಷ್ಠ 50 ಕೋಟಿ ರೂ. ಬಂಡವಾಳ ಹೂಡಿ ಉದ್ದಿಮೆಗಳನ್ನು ಸ್ಥಾಪಿಸಲು ಅನುಮೋದನೆಗಾಗಿ ಏಕ ಗವಾಕ್ಷಿ ಸಮಿತಿಗೆ ಸಲ್ಲಿಸಲ್ಪಡುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡುವ ಸಂದರ್ಭದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಡುವ ಮತ್ತು ಡಾ: ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿರುವುದನ್ನು ಖಚಿತಪಡಿಸಿಕೊಳ್ಳಲು ಅನುವಾಗುವಂತೆ ಮತ್ತು ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಪ್ರಾತಿನಿಧ್ಯ ದೊರಕಿಸಿಕೊಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ದಿನಾಂಕ: 18.2.99 ರಂದು ನಡೆದ ಸಮಾಲೋಚನಾ ಸಭೆಯಲ್ಲಿ ತೀರ್ಮಾನಿಸಲಾಗಿದ್ದು ಅದರಂತೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳನ್ನು ಸಮಿತಿಗೆ ಸದಸ್ಯರನ್ನಾಗಿ ನೇಮಿಸಿ ಆದೇಶ ಹೊರಡಿಸಲು ಕೋರಿದ್ದಾರೆ.

4. ಡಾ: ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ದಿನಾಂಕ: 18.4.2000 ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಉನ್ನತ ಮಟ್ಟದ ಸಮಿತಿ ಹಾಗೂ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯವರನ್ನು ಸದಸ್ಯರನ್ನಾಗಿ ನೇಮಿಸಲು ತೀರ್ಮಾನಿಸಲಾಗಿದೆ.

5. ಮೇಲ್ಕಂಡ ಪ್ರಸ್ತಾವನೆಗಳನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ:

**ಸರ್ಕಾರಿ ಆದೇಶ ಸಂಖ್ಯೆ: ಸಿಐ 140 ಎಸ್‌ಪಿಐ 96 ಬೆಂಗಳೂರು, ದಿನಾಂಕ: 13.6.2000**

ರಾಜ್ಯದಲ್ಲಿ ಸ್ಥಾಪಿತಗೊಂಡಿರುವ 50 ಮತ್ತು 50ಕ್ಕಿಂತ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಇರುವ ಬಹುರಾಷ್ಟ್ರೀಯ ಕಂಪನಿಗಳನ್ನೊಳಗೊಂಡಂತೆ ಎಲ್ಲಾ ಕೈಗಾರಿಕಾ ಘಟಕಗಳಲ್ಲಿ (ಅಂದರೆ ಸಣ್ಣ ಪ್ರಮಾಣದ, ಮಧ್ಯಮ ಮತ್ತು ಬೃಹತ್ ಪ್ರಮಾಣದ ಕೈಗಾರಿಕೆಗಳು) ಸ್ಥಳೀಯರಿಗೆ: ಕನ್ನಡಿಗರಿಗೆ ಉದ್ಯೋಗ ಅವಕಾಶ ಕಲ್ಪಿಸಿಕೊಡುವ ಬಗ್ಗೆ ಖಾತರಿಪಡಿಸಿಕೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳನ್ನು ಬಂಡವಾಳ ಹೂಡಿಕೆದಾರರಿಗೆ ಅನುಮತಿ ಹಾಗೂ ಮಂಜೂರಾತಿ ನೀಡಲಾಗುತ್ತಿರುವ ಸಮಿತಿಗಳಿಗೆ ಈ ಕೆಳಕಂಡಂತೆ ಖಾಯಂ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ನೇಮಿಸಲಾಗಿರುತ್ತದೆ.

| | | |
|---|---|---|
| ಉನ್ನತ ಸಮಿತಿ ಸಭೆ | – | ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ | – | ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ | – | ಸಂಬಂಧಪಟ್ಟ ಜಿಲ್ಲೆಯ ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ |

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

– ಸಹಿ –
(ಟಿ. ಪ್ರೇಮನರಸಿಂಹಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾ ಮತ್ತು ಕೈ ಇಲಾಖೆ (ಕೈಅ)